ಕೃಷಿ ಉತ್ಪನ್ನಗಳಿಗಾಗಿ ಬೆಲೆ ನಿಗದಿಪಡಿಸುವುದು

೩೧೨. ಪ್ರೊ ಎಂ ಡಿ. ನಂಜುಂಡಸ್ವಾಮಿ.: ಮಾನ್ಯ ಕೃಷಿ ಮತ್ತು ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷಿ ಇಲಾಖೆ ಇದುವರೆವಿಗೂ ಕೃಷಿ ಪಸ್ತುಗಳ ಉತ್ಪಾದನಾ ಬೆಲೆ ನಿಗದಿ ಮಾಡಲು ಅನುಸರಿಸಿದ ವಿಧಾನಗಳೇನು ?

ಆ) ಕೇಂದ್ರ ಸರ್ಕಾರ ಇತ್ತೀಚೆಗೆ ಈ ಬಗ್ಗೆ ಮಾಡುತ್ತಿರುವ ಸುಧಾರಣೆಗಳ ಬಗ್ಗೆ ರಾಜ್ಯ ಸರ್ಕಾರವು ಏನಾದರೂ ಗಮನಹರಿಸಿ ಕಾರ್ಯೋನ್ಮುಖವಾಗಿದೆಯೇ ?

ಶ್ರೀ ಎಸ್. ಬಂಗಾರಪ್ಪ (ಕೃಷಿ ಮತ್ತು ತೋಟಗಾರಿಕೆ ಸಚಿವರು).—

ಅ) ರಾಜ್ಯ ಕೃಷಿ ಇಲಾಖೆಯಾಗಲಿ ಅಥವಾ ರಾಜ್ಯ ಸರ್ಕಾರವಾಗಲಿ ಕೃಷಿ ಉತ್ಪನ್ನಗಳ ಬೆಲೆಯನ್ನು ನಿಗದಿಪಡಿಸಿಲ್ಲ. ಕೃಷಿ ಉತ್ಪನ್ನಗಳ ಬೆಂಬಲ ಬೆಲೆಯನ್ನು ನಿಗದಿಪಡಿಸಲು ಕೇಂದ್ರ ಸರ್ಕಾರದ ಕೃಷಿ ಉತ್ಪನ್ನ ಬೆಲೆ ಮತ್ತು ಬೆಲೆ ಆಯೋಗವು ಕೇಳುವ ಮಾಹಿತಿಯನ್ನು ಸಲಹೆಯೊಂದಿಗೆ ರಾಜ್ಯ ಸರ್ಕಾರವು ಒದಗಿಸುತ್ತಿದೆ. ಕೇಂದ್ರ ಸರ್ಕಾರವು ಅಂತಿಮವಾಗಿ ಕೃಷಿ ಉತ್ಪನ್ನ ಬೆಲೆ ಮತ್ತು ಬೆಲೆ ಆಯೋಗವು ಮಾಡಿದ ಶಿಫಾರಸ್ಸಿನ ಆಧಾರದ ಮೇಲೆ ಮತ್ತು ರಾಜ್ಯ ಸರ್ಕಾರಗಳ ಶಿಫಾರಸ್ಸಿನ ಆಧಾರದ ಮೇಲೆ ಬೆಂಬಲ ಬೆಲೆಯನ್ನು ನಿರ್ಧಾರ ಮಾಡುವುದು.

ಆ) ಕೃಷಿ ಉತ್ಪಾದನೆ ಲಾಭದಾಯಕವಾಗಿ ಮಾಡುವ ವಿಷಯದಲ್ಲಿ ಡಾ. ಪಿ.ಜೆಚ್. ಹನುಮಂತ ರಾವ್‌ರವರ ಅಧ್ಯಕ್ಷತೆಯಲ್ಲಿ ಮತ್ತು ಕೃಷಿಯನ್ನು ಕೈಗಾರಿಕೆ ಎಂದು ಪರಿಗಣಿಸುವ ವಿಷಯದಲ್ಲಿ ಶ್ರೀ ಭಾನುಪ್ರತಾಪ್ ಸಿಂಗ್‌ರವರ ಅಧ್ಯಕ್ಷತೆಯಲ್ಲಿ ಕೇಂದ್ರ ಸರ್ಕಾರವು ಪರಿಣಿತರ ಸಮಿತಿಗಳನ್ನು ರಚಿಸಿದೆ. ಈ ಸಮಿತಿಗಳು ಮಾಡಿರುವ ಶಿಫಾರಸ್ಸುಗಳು ರಾಜ್ಯ ಸರ್ಕಾರಕ್ಕೆ ಇನ್ನೂ ಬಂದಿರುವುದಿಲ್ಲ.

ಶ್ರೀ ಎಂ. ಡಿ. ನಂಜುಂಡಸ್ವಾಮಿ — ಅಧ್ಯಕ್ಷರೇ ಸಾಲದ ಸಮಸ್ಯೆ ಬಗೆಹರಿಯಲಿಲ್ಲವೆಂದು ಈಗ ಬೆಲೆ ಸಮಸ್ಯೆಯಾದರೂ ಬಗೆಹರಿಸುತ್ತಾರೋ ಏನೋ ಎಂದು ಪ್ರಯತ್ನ ಮಾಡುತ್ತಿದ್ದೇವೆ. ಉತ್ತರದಲ್ಲಿ ರಾಜ್ಯ ಸರ್ಕಾರ ಬೆಲೆ ನಿಗದಿ ಮಾಡುವುದಿಲ್ಲವೆಂದು ಹೇಳಲಾಗಿದೆ. ನಿಜ ಆದರೆ ಎರಡನೇ ಪಾಕ್ಯದಲ್ಲಿ

> "The State Government is furnishing the particulars required by the Commission for Agricultural Costs and Prices (CACP) of the Government of India with suggestions for fixation of support prices for the agricultural produce"

ಎಂದು ಹೇಳಿದ್ದಾರೆ. ಇಲ್ಲೇ ಇರುವುದು ಮೂಲ ಸಮಸ್ಯೆ. ನಾನು ನನ್ನ ಪ್ರಶ್ನೆ ಕಳಿಸಿವಾಗ ಕೃಷಿ ಇಲಾಖೆ ಅನುಸರಿಸಿದ ವಿಧಾನ (ಕಾಸ್ಟಿಂಗ್ ಮೆಥಡಾಲಜಿ) ಎಂದು ಬರೆದು ಕಳಿಸಿದ್ದೆ. ಇದನ್ನು ಕನ್ನಡದಲ್ಲಾಗಲಿ ಕೈ ಬಿಡಲಾಗಿದೆ ಮತ್ತು ಇಂಗ್ಲಿಷಿನಲ್ಲೂ ತರ್ಜುಮೆ ಮಾಡಿದವರು ಸಹ (ಕಾಸ್ಟಿಂಗ್ ಮೆಥಡಾಲಜಿ) ಅನ್ನು ಕೈ ಬಿಟ್ಟಿದ್ದಾರೆ. ಏನೂ ಆಡ್ಡಿ ಇಲ್ಲ. ಆದರೂ ಈ ಬಗ್ಗೆ ಇಲ್ಲಿ ಚರ್ಚೆ ಮಾಡಬಹುದು. ಕಾಸ್ಟಿಂಗ್ ಮೆಥಡಾಲಜಿಯಲ್ಲಿ ಮೂಲ ಸಮಸ್ಯೆ ಇರುವುದು. ಹಿಂದೆ ನಾವು ಅಂದರೆ ಒತ್ತಾಯ ಮಾಡಿದ ಮೇಲೆ ಆಗಿನ ಕೃಷಿ ಸಚಿವರಾಗಿದ್ದ ಶ್ರೀ ಬಂಗಾರಪ್ಪನವರ ಅಧ್ಯಕ್ಷತೆಯಲ್ಲೇ ಬೆಲೆ ಸಮಿತಿ ರಚನೆಯಾಗಿತ್ತು. ಅದಾದ ನಂತರ ಹೋದ ಸರ್ಕಾರ ಕೂಡ ಶ್ರೀ ಎಂ. ಪಿ. ಪ್ರಕಾಶರ ಅಧ್ಯಕ್ಷತೆಯಲ್ಲಿ ಬಂದು ಸಮಿತಿ ನೇಮಕ ಮಾಡಿತು. ಇವೆರಡರಲ್ಲಿ ಬಂಗಾರಪ್ಪನವರ ವರದಿ ಹೆಚ್ಚು ವೈಜ್ಞಾನಿಕವಾಗಿತ್ತು. ಆದರೂ ಇದು ಸಂಪೂರ್ಣವಾಗಿ ಚೆನ್ನಾಗಿಲ್ಲ. ಆದ್ದರಿಂದ ಸರ್ಕಾರದಿಂದ ನಾನು ಅಪೇಕ್ಷಿಸುವುದೇನೆಂದರೆ ಈಗ ಕೇಂದ್ರ ಸರ್ಕಾರ ಕೃಷಿಯನ್ನು ಕೈಗಾರಿಕೆ ಎಂದು ಘೋಷಿಸುವುದಕ್ಕಾಗಿ ಶ್ರೀ ಭಾನುಪ್ರತಾಪ್‌ಸಿಂಗ್ ರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮತ್ತೆ ಶ್ರೀ ಹನುಮಂತರಾಯರ ಅಧ್ಯಕ್ಷತೆಯಲ್ಲಿ ಮತ್ತೊಂದು ಸಮಿತಿಯನ್ನು ಬೆಲೆಗಳನ್ನು ನಿಗದಿ ಮಾಡಲು ಮಾಡಿದೆ. ಆದರೆ ಈ ಸಮಿತಿಗಳ ವರದಿಗಳು ಆಗಲೇ ನಮ್ಮ ಕಡೆ ಬಂದಿವೆ. ಆದರೆ ಸರ್ಕಾರಕ್ಕೆ ಬಂದಿಲ್ಲವೆಂದು ಹೇಳಿದ್ದಾರೆ. ಶ್ರೀ ಭಾನುಪ್ರತಾಪ್‌ಸಿಂಗ್‌ರ ಸಮಿತಿ ವರದಿ ಇಂಟರಿಮ್ ರಿಕಮೆಂಡೇಷನ್ಸ್ ಮಾಡಿದೆ. ಅವು ಸಹ ದೋಷಪೂರಿತವಾಗಿವೆ ಎಂದು ರೈತರ ಸಾಲಕ್ಕೆ ಮೂಲ ಕಾರಣ ಅವೈಜ್ಞಾನಿಕ ಬೆಲೆ ಲೆಕ್ಕಾಚಾರ. the costing methodology that is followed by the Farm Management Cell of the Agriculture Department is totally un cientific. It has no relationship with reality, ಆ ಕಾರಣದಿಂದ ನಾನು ಮಾನ್ಯ ಕೃಷಿ ಸಚಿವರಿಗೆ ಹೇಳುವುದೇನೆಂದರೆ ಮತ್ತೊಮ್ಮೆ ವೈಜ್ಞಾನಿಕವಾದ ಎಕ್ಸರ್‌ಸೈಜ್ ಮಾಡೋಣವೇ, ವೈಜ್ಞಾನಿಕವಾಗಿ ಬೆಲೆ

ನಿಗದಿ ಮಾಡುವುದಕ್ಕೆ? ಏಕೆಂದರೆ ಈಗ ದೇಶದ ತುಂಬಾ ಮಾತುಕತೆ ನಡೆಯುತ್ತಿದೆ. ಕೃಷಿಯನ್ನು ಕೈಗಾರಿಕೆ ಎಂದು ಪರಿಗಣಿಸಲು. So whether we have to make a fresh exercise in adopting the same costing mehodology that is followed by the industrial Sector

ಶ್ರೀ ಎಸ್. ಬಂಗಾರಪ್ಪ. (ಕೃಷಿ ಸಚಿವರು) — ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಪ್ರಶ್ನೆ ಮೂಲಭೂತವಾಗಿ ಒಂದೇ ಒಂದು ವಿಚಾರಕ್ಕೆ ಸಂಬಂಧಿಸಿದ್ದು. ಅದು ಬೆಳೆಗಳಿಗೆ ನ್ಯಾಯಯುತ ಬೆಲೆ ನಿಗಬೇಕೆಂಬುದು ಈ ಮಾತು ಹೊಸದಲ್ಲ. ಈ ಸದನದ ಒಳಗಡೆ ಮತ್ತು ಹೊರಗಡೆ ಅನೇಕ ಸಲ ಈ ವಿಚಾರದಲ್ಲಿ ಅನೇಕ ಪಕ್ಷಗಳು, ತಜ್ಞರು, ರೈತ ನಾಯಕರು, ರೈತರು ಮತ್ತು ಸಾರ್ವಜನಿಕ ಜೀವನದಲ್ಲಿರುವವರು ಅನೇಕ ಸಂಶೋಧಕರು ತಮ್ಮ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಈಗ

೧೧-೪೦ ಎ.ಎಂ.

ತಮ್ಮ ಪ್ರಶ್ನೆಗೆ ಉತ್ತರವನ್ನು ಕೊಡತಕ್ಕಂಥ ಸಂದರ್ಭದಲ್ಲಿ ನಾವು ಇಲ್ಲಿ ಯಾವುದೇ ಬೆಲೆಯನ್ನು ನಿಗದಿ ಮಾಡತಕ್ಕಂಥ ಒಂದು ಶಕ್ತಿ ಅಥವಾ ಹಕ್ಕು ರಾಜ್ಯ ಸರ್ಕಾರಕ್ಕೆ ಇಲ್ಲ ಎನ್ನತಕ್ಕಂಥ ಒಂದು ವಿಚಾರವನ್ನು ತಾವು ಕೂಡಾ ಒಪ್ಪಿಕೊಳ್ಳುತ್ತೀರಿ. ಯಾವುದೇ ಬೆಲೆಯನ್ನು ನಿಗದಿ ಮಾಡಬೇಕು ಎಂದರೆ ಕೇಂದ್ರ ಸರ್ಕಾರ ಮಾತ್ರ ಅದನ್ನು ಮಾಡಬೇಕಾಗುತ್ತದೆ. ಯಾವುದೇ ಕೃಷಿಗೆ ಸಂಬಂಧಪಟ್ಟಿರತಕ್ಕಂಥ ಬೆಳೆ ಯಾವುದೇ ಇರಬಹುದು. ಯಾವುದೇ ದವಸ ಧಾನ್ಯ ಇರಬಹುದು. ಕಬ್ಬು, ಭತ್ತ, ಜೋಳ, ಗೋಧಿ ಮತ್ತೊಂದು ಇರಬಹುದು. ಆದರ ಬೆಲೆಯನ್ನು ನಿಗದಿ ಮಾಡತಕ್ಕಂಥವರು ಕೇಂದ್ರ ಸರ್ಕಾರದವರು. ಆ ರೀತಿ ಮಾಡುವುದಕ್ಕೆ ಬೇಕಾಗಿರತಕ್ಕಂಥ ವಿಧಾನ, ಅನುಸರಿಸಬೇಕಾದಂಥ ನೀತಿ ಇದ್ದರೂ ಕೂಡಾ ಅವರಿಗೇ ಸಂಬಂಧಪಟ್ಟಿರತಕ್ಕಂಥ ಪ್ರಶ್ನೆ. ಆದರೆ ಹೆಚ್ಚಾಗಿ ಯಾವುದೇ ರಾಜ್ಯ ಸರ್ಕಾರ ಇರಬಹುದು. ಆ ರಾಜ್ಯ ಸರ್ಕಾರದ ಅಭಿಪ್ರಾಯವನ್ನು ಅವರು ಕೇಳುತ್ತಾರೆ. ಯಾವ ಯಾವ ಬೆಳೆಗಳ ವಿಚಾರದಲ್ಲಿ ಬೆಲೆ ಯಾವ ರೀತಿ ಇದ್ದರೆ ಒಳ್ಳೆಯದು ಎನ್ನತಕ್ಕಂಥದ್ದರ ಬಗ್ಗೆ ನಮಗೆ ಕೆಲವು ಪ್ರೊಫಾರ್ಮವನ್ನು ಕಳಿಸಿ ನಮ್ಮ ಅಭಿಪ್ರಾಯವನ್ನು ಕೇಳತಕ್ಕಂಥದ್ದು ಇದೆ. ಅಲ್ಲಿ ಪ್ರೈಸ್ ಕಮಿಷನ್ ಏನು ಇದೆ. ಅವರು ಅದನ್ನು ಕೂಡಾ ಗಮನಿಸಿ ಅವರ ಅಭಿಪ್ರಾಯಗಳನ್ನು ತಿಳಿದು ಕೆಲವು ತಮ್ಮ ವರದಿಯ ರೂಪದಲ್ಲಿ ಆರ್.ಪಿ.ಗೆ ಒಂದು. ರಬಿಗೆ ಪ್ರತಿ ವರ್ಷವೂ ಕೇಂದ್ರ ಸರ್ಕಾರಕ್ಕೆ ಆ ರೀತಿಯಲ್ಲಿ ವರದಿಯನ್ನು ಅವರು ಕೊಡುತ್ತಾರೆ ಆದರ ಆಧಾರದ ಮೇಲೆ ಕೇಂದ್ರ ಸರ್ಕಾರ ಈ ಬೆಲೆಯನ್ನು ನಿಗದಿ ಮಾಡತಕ್ಕಂಥ ಒಂದು ವಿಧಾನ ಮೊದಲಿನಿಂದಲೂ ಅನೂಚಾನವಾಗಿ ಬಂದಿರತಕ್ಕಂಥ ವಿಧಾನ. ಆದರೆ ಇಲ್ಲಿ ಏನಾಗಿದೆ ಎಂದರೆ, ರೈತರು ಅವರಿಗೆ ಎಷ್ಟು ಖರ್ಚು ಬರುತ್ತದೆ ಒಂದು ಬೆಳೆಯನ್ನು ತೆಗೆಯುವುದಕ್ಕೆ ಆ ಖರ್ಚನ್ನು ನಿಭಾಯಿಸಿ ಅವರು ಜೀವನ ಮಾಡುವುದಕ್ಕೂ ಸಾಧ್ಯವೇ ಆಗುತ್ತಿಲ್ಲ ಎನ್ನತಕ್ಕಂಥ ಒಂದು ಅಭಿಪ್ರಾಯವನ್ನು ಪದೇ ಪದೇ ಎಲ್ಲಾ ಮೂಲಗಳಿಂದಲೂ ಕೂಡಾ ಕೇಳಿ ಬರುತ್ತಿರುವುದರಿಂದ ಆ ಅಭಿಪ್ರಾಯವನ್ನು ನಾವು ಕೂಡಾ ಅದನ್ನು ಅನುಮೋದನೆ ಮಾಡುತ್ತೇವೆ. ಆ ವಿಚಾರವನ್ನು ಸರ್ಕಾರ ಕೂಡಾ ಒಪ್ಪುತ್ತದೆ. ಆದರೆ ಅದನ್ನು ಹೇಗೆ ಮಾಡಬೇಕು ಎನ್ನತಕ್ಕಂಥ ವಿಚಾರದಲ್ಲಿ. ತೀರ್ಮಾನ ಮಾಡತಕ್ಕಂಥ ಶಕ್ತಿ ಮತ್ತು ನೀತಿ ಕೇಂದ್ರ ಸರ್ಕಾರದ ಜೊತೆಗೆ ಇರುವುದರಿಂದ ನಾವು ಮಾಡುವುದಕ್ಕೆ ಬರುವುದಿಲ್ಲ. ಹೆಚ್ಚು ಎಂದರೆ ನಾವು ನಮ್ಮ ಸಲಹೆಗಳನ್ನು ಕೊಡಬಹುದು. ಈ ಸಂದರ್ಭದಲ್ಲಿ ಹಿಂದೆ ನಾನು ಸಚಿವನಾಗಿದ್ದಾಗ ಒಂದು ಸಮಿತಿಯ ವರದಿಯನ್ನು ಕೊಟ್ಟಿರತಕ್ಕಂಥದ್ದು, ಹಿಂದಿನ ಸರ್ಕಾರ ಅಂದರೆ ಜನತಾ ಸರ್ಕಾರ ಇದ್ದಂಥ ಕಾಲದಲ್ಲಿ ಶ್ರೀಮಾನ್ ಎಂ. ಪಿ. ಪ್ರಕಾಶ್‌ರವರು ಅಧ್ಯಕ್ಷತೆ ವಹಿಸಿ ಒಂದು ವರದಿಯನ್ನು ಕೊಟ್ಟಿರತಕ್ಕಂಥದ್ದು. ಈ ವರದಿಯಲ್ಲಿ ನಾವು ಏನೇನು ಶಿಫಾರಸ್ಸುಗಳನ್ನು ಮಾಡಿದ್ದೇವೆ. ಅದನ್ನು ಆಯಾಯ ರಾಜ್ಯ ಸರ್ಕಾರ ನೋಡತಕ್ಕಂಥ ಒಂದು ವಿಚಾರ. ಈಗ ಹನುಮಂತರಾಯರ ಒಂದು ಸಮಿತಿಯನ್ನು ಬೆಲೆಯ ವಿಚಾರದಲ್ಲಿ ಕೇಂದ್ರ ಸರ್ಕಾರ ನೇಮಕ ಮಾಡಿ ಅವರಿಂದ ವರದಿಯನ್ನು ಪಡೆಯತಕ್ಕಂಥ ಒಂದು ಪ್ರಯತ್ನವನ್ನು ಕೂಡಾ ಅಲ್ಲಿ ಮಾಡಿದೆ. ಈಗ ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ರಾಜ್ಯದ ಗೌರ್ನರ್‌ರವರು ಏನು ಇದ್ದಾರೆ, ಶ್ರೀಮಾನ್ ಭಾನುಪ್ರಕಾಶ್‌ಸಿಂಗ್ ರವರ ಅಧ್ಯಕ್ಷತೆಯಲ್ಲಿ ಅನೇಕ ವಿಚಾರಗಳನ್ನು ಒಳಗೊಂಡಿರತಕ್ಕಂಥ ಮೂಲಭೂತವಾದ ಕೆಲವು ಪ್ರಶ್ನೆಗಳು ಇದ್ದಾವೆ. ನಾಳೆ ಕೃಷಿಯನ್ನು ಕೈಗಾರಿಕೆಯಾಗಿ ಅದನ್ನು ನೋಡಬೇಕೇ, ಬಿಡಬೇಕೇ ಎನ್ನುವ ಪ್ರಶ್ನೆ ಬಿರುವವರೆಗೂ ಹೋಗಿದೆ. ಈ ಸಂದರ್ಭದಲ್ಲಿ ನಾನು ವಿವರಗಳಿಗೆ ಹೋಗುವುದಿಲ್ಲ, ಏಕೆಂದರೆ ಇದು ಪ್ರಶ್ನೋತ್ತರ ವೇಳೆ. ಆ ರೀತಿ ನಾನು ವಿವರಕ್ಕೆ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಆ ಸಮಿತಿಯು ತನ್ನ ಮಧ್ಯಂತರ ವರದಿಯನ್ನು ಕೊಟ್ಟಿದೆ. ಆದರೆ ಸಂಪೂರ್ಣ ವರದಿಯನ್ನು ಕೊಡುವುದಕ್ಕೆ ಅವರಿಗೆ ಸಾಧ್ಯವಾಗಿಲ್ಲ. ಈ ಸಂದರ್ಭದಲ್ಲಿ ಅದನ್ನು ನಾನು ಹೇಳುವುದಾದರೂ ಕೂಡಾ

ಆದು ಒಳಿತಲ್ಲ ಎಂದು ನಾನು ಭಾವಿಸಿದ್ದೇನೆ. ಆದರೆ ಈ ವಿಷಯ ಚರ್ಚೆಗೆ ಬಹಳ ಗ್ರಾಸವಾದುದು, ಇದು ಮಹತ್ವಪೂರ್ಣವಾಗಿರತಕ್ಕದ್ದೆಂದು ನಾನು ಒಪ್ಪುತ್ತೇನೆ. ಆದರೆ ರಾಜ್ಯ ಸರ್ಕಾರದ ಜವಾಬ್ದಾರಿ ಕೇಂದ್ರ ಸರ್ಕಾರದವರು ಅಲ್ಲಿ ಪ್ರೈಸ್ ಕಮಿಷನ್ ಅವರ ಅಭಿಪ್ರಾಯವನ್ನು ತೆಗೆದು ಆಮೇಲೆ ತೀರ್ಮಾನ ಮಾಡಿ ಇಂಥ ಬೆಳೆಗಳಿಗೆ ಬೆಲೆ ಎಂದು ನಿಗದಿ ಮಾಡಿ ಕೆಲವೊಮ್ಮೆ ರಾಜ್ಯ ಸರ್ಕಾರದವರು ಉದಾಹರಣೆಗೆ ಗಾಡಿಯ ಬಾಡಿಗೆಗೋಸ್ಕರ ಎನ್ನತಕ್ಕಂಥ ಒಂದು ಐಟಂನ್ನು ಹಾಕಿ ನಾವು ಸ್ವಲ್ಪ ಕೊಟ್ಟಿರತಕ್ಕಂಥದ್ದು ಇದೆ. ಭತ್ತಕ್ಕೆ ದೇವರಾಜ ಅರಸರ ಕಾಲದಿಂದ ಹಿಡಿದು ಗಾಡಿ ಬಾಡಿಗೆ ಕೊಟ್ಟಿರುವುದನ್ನು ನಾವೆಲ್ಲ ಕಂಡಿದ್ದೇವೆ. ಇಂಥದ್ದಕ್ಕೆ ಪಾತ್ರ ಬಿಟ್ಟರೆ ಬೇರೆ ರಾಜ್ಯ ಸರ್ಕಾರಕ್ಕೆ ಅಧಿಕಾರ ಬರುವುದಿಲ್ಲ. ಆದುದರಿಂದ ಇಲ್ಲಿ ಭಾನುಪ್ರತಾಪ್ ಸಿಂಗರವರ ವರದಿ ಸಂಪೂರ್ಣವಾಗಿ ಬರಲಿ, ಏಕೆಂದರೆ ಎಂಟನೆ ಪಂಚವಾರ್ಷಿಕ ಯೋಜನೆ ಅಡಿಯಲ್ಲಿ ಅಗ್ರಿಕಲ್ಚರ್‌ನ್ನು ಇಂಡಸ್ಟ್ರಿಯಂತಾಗಿ ಟ್ರೀಟ್ ಮಾಡಬೇಕೂ ಎನ್ನತಕ್ಕಂಥ ವಾದ ಕೇಂದ್ರದ ಪುಟ್ಟದವರೆಗೂ ಇಲ್ಲಿಂದ ಹಿಡಿದು ಅಲ್ಲಿಯವರೆಗೂ ಇದೆ. ಜೊತೆಗೆ ಟೋಟಲ್ ಬಜೆಟ್‌ನಲ್ಲಿ ಅಗ್ರಿಕಲ್ಚರ್‌ಗೋಸ್ಕರ ಶೇ ಪರ್‌ಸೆಂಟನ್ನು ತೆಗೆದು ಇಡಬೇಕು ಎನ್ನತಕ್ಕಂಥ ವಾದವೂ ಕೂಡಾ ಇರಬೇಕಾದರೆ ಇದನ್ನು ನೋಡಬೇಕಾಗುತ್ತದೆ. ಇನ್ನು ಕೂಡಾ ಎನ್ ಡಿ.ಸಿ. ಸೇರಿಲ್ಲ ಪ್ಲಾನಿಂಗ್ ವಿಚಾರ ಆದು ಅಂತಿಮ ನಿರ್ಣಯ ಕೇಂದ್ರ ಸರ್ಕಾರದಿಂದ ಇನ್ನೂ ಬಂದಿಲ್ಲ. ಆದು ಬರುವುದಕ್ಕೆ ಪೂರ್ವಭಾವಿಯಾಗಿ ಈ ಪ್ರಶ್ನೆಯನ್ನು ಎತ್ತಿರುವುದು ಬಹಳ ಒಳ್ಳೆಯದು. ಬಹಳ ಪ್ರಾಮುಖ್ಯಕೆಯನ್ನು ಒಳಗೊಂಡಿರತಕ್ಕಂಥ ವಿಚಾರ ಇದು ಎನ್ನತಕ್ಕಂಥ ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ. ಇದು ಹೆಚ್ಚು ಎಂದರೆ ಚರ್ಚೆಗೆ ಗ್ರಾಸವೇ ಇನಹಾ ಅದನ್ನು ತೀರ್ಮಾನ ಮಾಡತಕ್ಕಂಥ ಹಕ್ಕು ನಮಗಿಲ್ಲ ಎಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಅದನ್ನು ತಿಳಿಸುತ್ತೇನೆ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ಮಾನ್ಯ ಅಧ್ಯಕ್ಷರೇ, ನನ್ನ ಆತಂಕ ಏನು ಅಂದರೆ, Agriculture Costs and Prices Commission was guided by suggestions sent from the farm management cell of the Department of Agriculture from all the States. ಇವರು ಇಲ್ಲಿ ತಪ್ಪು ಮಾಡುತ್ತಾ ಕಳಿತರೆ ಕಷ್ಟ. For example, I have a comparative study here of the actual costs and costs calculated by the farm management cell. ಫಾರಮ್ಸ್ ಮ್ಯಾನೇಜ್‌ಮೆಂಟ್ ಸೆಲ್‌ನವರು ಒಂದು ಹೆಕ್ಟೇರ್‌ಗೆ ಎಷ್ಟು ಖರ್ಚು ಬೀಳುತ್ತದೆ ಎಂದು ಹೇಳುತ್ತಾರೆ. ಆದು ರೈತರ ಲೆಕ್ಕಾಚಾರದಲ್ಲಿ ಒಂದು ಎಕರೆಗೆ ಖರ್ಚು ಬರುತ್ತದೆ. ನಾವು ಒಂದು ಎಕರೆಗೆ ಖರ್ಚು ಮಾಡತಕ್ಕದ್ದನ್ನು ಅವರು ಒಂದು ಹೆಕ್ಟೇರ್‌ಗೆ ಖರ್ಚು ತೋರಿಸಿದ್ದಾರೆ. ಮತ್ತೆ ಒಂದು ಹೆಕ್ಟೇರ್‌ನಲ್ಲಿ ಈಲ್ಡ್ ನಾವು ಲೆಕ್ಕಾಚಾರ ಮಾಡುವಾಗ Artificially boosted figures are given by the farm management cell. ಇಂತಹ ಶಿಫಾರಸ್ಸುಗಳನ್ನು ಹನುಮಂತಯ್ಯನವರ ಅಥವಾ ಭಾನುಪ್ರತಾಪ್ ಸಿಂಗ್ ಕಮಿಟಿಗೆ ಹೋಗಬಾರದು. ಆ ಕಾರಣದಿಂದ ಈಗ ರಾಜ್ಯ ಸರ್ಕಾರಗಳು ಎಚ್ಚರ ವಹಿಸಿದರೆ, ನಾವು ವೈಜ್ಞಾನಿಕವಾಗಿ ಲೆಕ್ಕಾಚಾರವನ್ನು ಹಾಕಬೇಕು. Our only demand is that the same methodology should be followed in Agriculture as it is followed in the industrial secter. ಇದರ ಆಧಾರದ ಮೇಲೆ...ಯಾಕೆಂದರೆ ಪ್ರಕಾಶ್ ಸಮಿತಿಯವರು...

MR SPEAKER.—I don't want to interrupt you, but the question is, during question hour you have to elicit the information. It cannot be argumentative. I understand, you have totally valid arguments. ನಮ್ಮ ಡಿವಷ್ಯಾಂಡ್ಸ್ ಬಂದಾಗ ಇದನ್ನೆಲ್ಲಾ ಹೇಳಬಹುದು.

PROF. M. D. NANJUNDASWAMY.—Sir I request you to allot half an hour.

MR. SPEAKER.—Please give in writing. I will consider.

ಪ್ರೊ. ಎಂ. ಡಿ. ನಂಜುಂಡಿಸ್ವಾಮಿ.—ಆಗಬಹುದು.

ಶ್ರೀ ಕೆ. ಎಚ್. ಹನುಮೇಗೌಡ.—ಈ ದೇಶದಲ್ಲಿ ಆಹಾರ ಪದಾರ್ಥಗಳನ್ನು ಬೆಳೆಯುವವರು ಬೇರೆ ರೇಟ್ ಫಿಕ್ಸ್ ಮಾಡುವವರು ಇನ್ನೊಬ್ಬರು. ನನಗೆ ಒಂದು ಸಂದೇಹ ಬರುತ್ತಿದೆ. ಎರಡು ವರ್ಷ ನಿಧಾನವಾದರೂ ಪರವಾಗಿಲ್ಲ. ದುಡ್ಡು ಹೆಚ್ಚು ಖರ್ಚು ಆದರೂ ಚಿಂತೆ ಇಲ್ಲ. ದೆಹಲಿಯಲ್ಲಿ ಪ್ರೈಸ್ ಕಮಿಷನ್‌ದವರು ಇದ್ದಾರಲ್ಲ ಅವರಿಗೆ ನಾಲ್ಕು-ನಾಲ್ಕು ಎಕರೆ ಜಮೀನು ಕೊಟ್ಟು ಸ್ವತಃ ಅವರೇ ಬೆಳೆದು

ಅವರ ಅನುಭವದ ಮೇಲೆ ರೇಟ್ ಫಿಕ್ಸ್ ಮಾಡಿ ಕೊಡಲಿ. ನಾವು ಎಲ್ಲಾ ಒಪ್ಪಿಕೊಳ್ಳುತ್ತೇವೆ. ದಯವಿಟ್ಟು ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಹರಿಸಿ ಅಲ್ಲಿಗೆ ಶಿಫಾರಸ್ ಕಳಿಸಬೇಕೆಂದು ನನಗನಿಸುತ್ತದೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಈ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಸದವಕಾಶ ಕೊಟ್ಟಿದ್ದಕ್ಕೆ ತಮಗೆ ಅಭಿನಂದನೆಗಳು. ಪ್ರೈಸ್ ಕಮೀಷನ್‌ರವರಿಗೆ ನಾಲ್ಕು ನಾಲ್ಕು ಎಕರೆ ಜಮೀನು ಕೊಟ್ಟು, ಅವರು ರೇಟ್ ಫಿಕ್ಸ್ ಮಾಡುವ ಬದಲು ಉಳುಮೆ ಮಾಡುವುದಕ್ಕೆ ಜಮೀನನ್ನು ಕೊಡಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಶ್ರೀ ಕೆ. ಎಚ್. ಹನುಮೇಗೌಡ.—ಅವರೇ ಮಾಡಬೇಕು. ಸಂಬಳ ತೆಗೆದುಕೊಂಡು ಉಳುಮೆ ಮಾಡುವುದು ಅಲ್ಲ. ಅವರೇ ಜಮೀನಿನಲ್ಲಿ ಬೆಳೆದು ಖರ್ಚು ಮಾಡಿ ಜೀವನ ಮಾಡಿ ಆ ಮೇಲೆ ರೇಟ್ ಫಿಕ್ಸ್ ಮಾಡಬೇಕು.

ಅಧ್ಯಕ್ಷರು.—ಈ ವರ್ಷ ಆದ ನಂತರ ಈ ಸಭೆಗೆ ಅದರ ಬಗ್ಗೆ ಏನಾಯಿತು ಎಂದು ತಿಳಿಸಿ.

ಶ್ರೀ ಎಸ್. ಬಂಗಾರಪ್ಪ.—ಇದು ಒಂದು ರೀತಿಯಿಂದ ಬಹಳ ಒಳ್ಳೆಯ ಸಲಹೆ. ಇದು ಪರಿಶೀಲಿಸಬೇಕಾದ ಅಂಶವಾಗಿದೆ, ಅದನ್ನು ಅಷ್ಟಕ್ಕೆ ನಿಲ್ಲಿಸೋಣ.

ಅಧ್ಯಕ್ಷರು.—ಪರಿಶೀಲಿಸಿ, ಅರ್ಧ ಗಂಟೆ ಚರ್ಚೆಗೆ ಬರುತ್ತದೆ, ಅದರಲ್ಲಿ ಇದೆಲ್ಲಾ ಬರುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಪ್ರೊಫೆಸರ್ ನಂಜುಂಡಸ್ವಾಮಿ ಅವರು ಇದರ ಬಗ್ಗೆ ಸಪರೇಟ್ ಚರ್ಚೆ ಆಗಬೇಕು ಎಂದು ಹೇಳಿದ್ದಾರೆ. We don't have any objection because that matter is very very important. ಇದರ ಬಗ್ಗೆ ಮತ್ತೊಂದು ಅಭಿಪ್ರಾಯ ಇಲ್ಲ. ಚರ್ಚೆಗೆ ಸರ್ಕಾರದಿಂದ ಉತ್ತರ ಕೊಡುವುದಕ್ಕೆ ಸಿದ್ಧನಾಗಿದ್ದೇನೆ.

ಪ್ರಶ್ನೆ ಸಂಖ್ಯೆ: ೧೦೧ (ಳಖ೨) (ಸದಸ್ಯರು ಗೈರು ಹಾಜರಿ)

ಪ್ರಶ್ನೆ ಸಂಖ್ಯೆ: ೧೦೨ (ಳಖ೮) (ಸದಸ್ಯರು ಗೈರು ಹಾಜರಿ)

ಪ್ರಶ್ನೆ ಸಂಖ್ಯೆ: ೧೦೩ (ಳಖ೧೧) (ಸದಸ್ಯರು ಗೈರು ಹಾಜರಿ)

ಅಫಜಲ್‌ಪುರಕ್ಕೆ ಪದವಿ ಮಹಾವಿದ್ಯಾಲಯ

೩೯. ಶ್ರೀ ಮಾಲೀಕಯ್ಯ ಎ. ಗುತ್ತೇದಾರ್ (ಅಫಜಲ್‌ಪುರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಅಫಜಲ್‌ಪುರದಲ್ಲಿ ಡಿಗ್ರಿ ಕಾಲೇಜು ಪ್ರಾರಂಭವಾಗಿದ್ದು ಕಟ್ಟಡ ಇಲ್ಲದೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ತೊಂದರೆಯನ್ನು ನಿವಾರಿಸಲು ಹಾಗೂ ಕಟ್ಟಡ ಕಟ್ಟಲು ಸರ್ಕಾರದವರು ತೆಗೆದುಕೊಳ್ಳಲಿರುವ ಕ್ರಮಗಳೇನು ?

ಶ್ರೀ ಕೆ. ಹೆಚ್. ರಂಗನಾಥ (ಶಿಕ್ಷಣ ಮಂತ್ರಿಗಳು).—

ಅ) ಬಂದಿದೆ.

ಆ) ಕಾಲೇಜಿನ ಕಟ್ಟಡ ನಿರ್ಮಿಸಲು ನಿವೇಶನ ಇನ್ನೂ ದೊರಕಿಸಿಕೊಳ್ಳಬೇಕಾಗಿದೆ. ಗುಲ್ಬರ್ಗಾ ಜಿಲ್ಲಾಧಿಕಾರಿಗಳನ್ನು ಈ ಕಾಲೇಜಿಗೆ ಬೇಕಾದ ನಿವೇಶನವನ್ನು ಒದಗಿಸಲು ಕೋರಲಾಗಿದೆ. ನಿವೇಶನ ಹೊಂದಿದನಂತರ ಹಣದ ಲಭ್ಯತೆಗನುಗುಣವಾಗಿ ಕಾಲೇಜು ಕಟ್ಟಡ ಕಟ್ಟಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

(ಶ್ರೀ ಬಿ. ಸ್ವಾಮಿರಾವ್ ಅವರು ಮಾನ್ಯ ಮಾಲೀಕಯ್ಯ ಗುತ್ತೇದಾರ್ ಅವರ ಪರವಾಗಿ ಪ್ರಶ್ನೆಯನ್ನು ಕೇಳಿದರು).

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ, ಈ ಕಾಲೇಜಿನ ಕಟ್ಟಡ ಯಾವಾಗ ಆಗುತ್ತದೆ, ಮತ್ತು ಈಗಾಗಲೇ ಅಲ್ಲಿ ತೊಂದರೆ ಆಗಿರುವುದು ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೇ ಎಂದು ಕೇಳುತ್ತಿದ್ದೇನೆ.